ಕಷ್ಟದಲ್ಲಿದ್ದಾಳೆ... ಅವಳಿಗೆ ತೊಂದರೆ ಕೊಡಬೇಡ' ಅಂದಿದ್ದಳು. ಏನು ನಿನ್ನ ಮಾತಿಗರ್ಥ ಎಂದು ರೇಗಿದವನಿಗೆ 'ಕಳ್ಳ, ಮತ್ತೆ ಅವಳ ಕೈ ಹಿಡಿದು ಬಚ್ಚಲು ಮನೆ, ಭತ್ತದ ಮನೆ ಅಂತ ಬಾಗಲು ಹಾಕಬೇಡ ಅಂತ' ವಾರಿಜ ನನಗೊಬ್ಬನಿಗೇ ಕೇಳಿಸುವಂತೆ ಮೆತ್ತಗೆ ಕಿವಿಯಲ್ಲಿ ಹೇಳಿ ಮೆಲು ನಕ್ಕು ಓಡಿ ಹೋಗಿದ್ದಳು . ಹೇಗೆ ತಿಳಿಯಿತೋ... ಚಂದ್ರಾ ಹೇಳಿದ್ದರೂ ಹೇಳಿರಬೇಕು. ಇಲ್ಲ ವಾರಿಜಳೇ ನೋಡಿದ್ದರೂ ನೋಡಿದ್ದಳೇ. ನನಗೆ ಮೊದಲು ಸ್ವಲ್ಪ ನಾಚಿಕೆಯೆನಿಸಿದರೂ ಮರುಕ್ಷಣವೇ ಮನಸು ತೇಲಿಸಿ ಎಲ್ಲ ಮರೆಯುವ ಪ್ರಯತ್ನ ಮಾಡಿದ್ದೆ. ಆದರೆ, ಅಂದೆಂದೋ ನಡೆದ ಅವೆಲ್ಲವೂ ಅದೇ ಆಗಿನ್ನೂ ನಡೆದ ಘಟನೆಗಳಂತೆ ಯಥಾವತ್ ಕಣ್ಣೆದುರು ಬಂದು ಕಾಡಿದ್ದವು. ಚಂದ್ರಾ ಈಗಲೂ ಚೆನ್ನಾಗೇ ಇದ್ದಳು. ಅವಳ ಕಣ್ಣುಗಳು ಒಂದು ಎಳೆ ಮಂಕಾಗಿಯೂ ಕೂದಲೊಂದೆಳೆ ತೆಳುವಾಗಿಯೂ ಇದ್ದದ್ದು ಬಿಟ್ಟರೆ ಚಂದ್ರಾ ಹಾಗೇ ಇದ್ದಳು. ಚಂದ್ರಾ ಹಾಗೆ ಮಾಡಬಾರದಿತ್ತು. ಅಮ್ಮ ಪದೇ ಪದೇ ಹೇಳುವಾಗ ನನಗೂ ಹಾಗೇ ಅನ್ನಿಸಿದ್ದಿತ್ತು. ವಾರಿಜ ಮಾತ್ರ ಇದನ್ನ ಖಡಾಖಂಡಿತವಾಗಿ ನಿರಾಕರಿಸಿದ್ದಳು. 'ಹಾಗೇನಿಲ್ಲ ರವೀ, ಚಂದ್ರಾಳ ಸ್ಥಾನದಲ್ಲಿ ಈ ವಾರಿಜ ಇದ್ದಿದ್ದರೂ ಹೀಗೇ ಆಗಬಹುದಿತ್ತು. ಬೇಕೇ ಬೇಡವೇ ಎಂದು ನಿರ್ಧರಿಸುವ ಅವಕಾಶ ಅವಳಿಗಿತ್ತೋ ಇಲ್ಲವೋ. ಇಲ್ಲ ಅವಳೇ ಒಂದು ವೇಳೆ ಯಾಕಾಗಬಾರದು ಅಂದುಕೊಂಡಳೋ ಏನೋ... ಅದೇನೇ ಆದರೂ ಇವತ್ತು ಅದನ್ನೆದುರಿಸ್ತಾ ಇರೋ ರೀತಿ ಮಾತ್ರ ಕಠಿಣ. ಎಲ್ಲರಿಂದಲೂ ಹೀಗೊಂದು ಮನಸು ಮಾಡಲು ಸಾಧ್ಯವಿಲ್ಲ.'

'ಹಾಗೆಲ್ಲ ಏನಿಲ್ಲ, ಬೇಡ ಅನ್ನೋಕೆ ಅವಳಿಗೆ ಸಾಧ್ಯವಿತ್ತು. ಈಗಲೂ ಅದನ್ನ ಪ್ರೂವ್ ಮಾಡೋಕೆ ಕೂಡ ಅವಳಿಂದ ಸಾಧ್ಯವಿದೆ ಆದ್ರೂ ಅವಳು ಮಾಡ್ತಾ ಇಲ್ಲ ಅಂದ್ರೆ, ಅವಳಿಗೆ ಏನೋ ಗೊಂದಲವಿದೆ ಅಂತ ಅರ್ಥ.'

'ಛಿ, ಕೆಟ್ಟದಾಗಿ ಯೋಚಿಸ್ತೀಯ ರವೀ ನೀನು, ನಿನ್ನ ಮಾತು ನೋಡು ಅದಕ್ಕೆ ತಕ್ಕ ಹಾಗೆ ಇಲ್ನೋಡು ಅವತ್ತು ಚಂದ್ರಾ ಸಿಕ್ಕಿರದೆ ಹೋಗಿದ್ದರೆ ನೀನು ನನ್ನ ಕೈ ಹಿಡಿದು ಎಳೀತಾ ಇದ್ದೆ, ಮುಖ್ಯ ನಾನೂ ನಿರಾಕರಿಸ್ದೆ ಒಪ್ಕೋ ಬಿಟ್ಟಿರತಾ ಇದ್ದೆ.'

'ಛೇ ಛೇ ಇಲ್ಲಪ್ಪಾ, ಅಂಥ ಯೋಚ್ನೆ ನಂಗೆ ಒಂದ್ಸಲಾನೂ ಬಂದಿಲ್ಲ, ಅದೇ ಈಗ ಹೇಳು ಬೇಕಾದ್ರೆ' ನಾನು ತಮಾಷೆಯಲಿ ಮುಂಬರಿದು ಅವಳ ಕೈ ಹಿಡಿಯಲು ಹೋದ್ರೆ ಅವಳು ಮಾರುದೂರ ಹಾರುತ್ತಿದ್ದಳು.

ನಾನು ನಕ್ಕು ಸುಮ್ಮನಾಗುತ್ತಿದ್ದೆ. ನಿಜ ಹೇಳಬೇಕೆಂದರೆ ವಾರಿಜಳ ಮೇಲೆ ನನಗೆ ಯಾವುದೇ ವಿಶೇಷ ಭಾವನೆ ಇರಲಿಲ್ಲ. ಅವಳೆಂದರೆ ಒಂದು ಅಸಡ್ಡೆಯಿತ್ತು. ಏನೆಂದರೂ ಸಹಿಸುತ್ತಿದ್ದ, ಕೋಪಿಸಿಕೊಳ್ಳದ, ಎಷ್ಟು ಕೆಲಸ ಹೇಳಿದರೂ ಮೌನವಾಗಿ ಮುಗಿಸುತ್ತಿದ್ದ ವಾರಿಜಳ ಬಗೆ ನನಗೆ ಯಾವ ಆದರವೂ ಇರಲಿಲ್ಲ. ಅವಳಿರುವುದೇ ಇದಕ್ಕಾಗಿ ಅನಿಸುತ್ತಿತ್ತು. ಅದು ನಾನು ಕಾಲೇಜು ಸೇರುವ ತನಕ ಬದಲಾಗದೆ ಹಾಗೇ ಉಳಿದಿತ್ತು. ಹೈಸ್ಕೂಲು ಮುಗಿದ ಮೇಲೆ ಅಪ್ಪ ನನ್ನನ್ನು ಪೇಟೆಯಲ್ಲಿ ಕಾಲೇಜಿಗೆ ಸೇರಿಸಿದ್ದ. ಹಾಸ್ಟೆಲ್ಲಿನಲ್ಲಿದ್ದುಕೊಂಡು ಓದುವುದು ಮತ್ತು ವಾರಾಂತ್ಯದಲ್ಲಿ ಮನೆಗೆ ಬರುವುದು ಅಂತಾಗಿತ್ತು. ಹೆಚ್ಚು ಓದುವುದು ವಾರಿಜಳ ಭಾಗ್ಯದಲ್ಲಿ ಬರೆದಿರಲಿಲ್ಲವಾಗಿ ಅವಳು ಊರಲ್ಲೇ ಉಳಿದಿದ್ದಳು. ನಾನು ಹೋಗಿ ಬಂದು ಮಾಡುತ್ತಿರುವ ಇದೇ ಹೊತ್ತಿನಲ್ಲಿ ಗಮನಿಸಿದ್ದೆ. ವಾರಿಜಳಲ್ಲೂ ಒಂದು ಚೆಲುವಿತ್ತು. ಹೂವರಳಿದಂತೆ ಅದು ಗೊತ್ತೇ ಆಗದಂತೆ ನಿಧನಿಧಾನಕ್ಕೆ ಅರಳುತ್ತಿತ್ತು; ಬೇಲಿಯ ಹೂಗಳಂತೆ ಅದು ಕಣ್ಣೆದುರೇ ಇದ್ದರೂ ಕಾಣದೇ ಉಳಿದಿತ್ತು. ಅವಳ ಚೆಲುವಿಕೆಯಲ್ಲೊಂದು ಸರಳತೆಯಿತ್ತು. ನಾನು ಏನು ಕೇಳಿದರೂ ಇಲ್ಲವೆನ್ನದೆ